

ಬೆಳಗಾವಿ ಸುವರ್ಣ ಸೌಧ

ನನಗ್ಯಾಕೋ ಸಂಶಯ ಬಂದು ನಿನ್ನ ಹಣಿ, ಕುತ್ತಿಗಿ ಕೆಳಗ ಕೈ ಹಚ್ಚಿ ನೋಡಿದೆ. ಮೈ ಕಾದ ಹಂಚಿನ ಗತೆ ಸುಡಲಿಕತ್ತದ ನಿಂದು! ಆವಾಗ ಊರಾಗ ಟೈಫಾಯಿಡ್ ಸಾಥ ಭಾಳ ಇತ್ತು. ಮುಂಜಾನಿ ಆರಾಮಿದ್ದಿ, ಈಗ ನೋಡಿದ್ರ ಮೈ ಸುಡಲಿಕತ್ತದ, ನಂಗಂತೂ ಭಾಳ ಘಾಬರಿ ಆತು. ನಂಗೂ ಅವ್ವ ಆಗಿ ಆರೂವರೆ ವರ್ಷ ಅನುಭವ ಅಷ್ಟs!

ಇಂಥಾ ಟೈಮಿನಾಗ ಇವ್ರು ಬ್ಯಾರೆ ಜೋಡಿ ಇರೂದಿಲ್ಲ ಅಂತ ನಿಮ್ಮಪ್ಪನ್ನಷ್ಟ ಮನಸ್ನಾಗ ಬೈಕೊಂಡೆ. ದಾದಾ ಕಂಪೌಂಡರ್ ಆಗಿದ್ರಿಂದ ಯಾವ್ದಕ್ಕೂ ಇರ್ಲಿ ಅಂತ ಕಾಲ್ಪಾಲ್ ಔಷಧ ಇಟ್ಟ ಕಳಿಸಿದ್ರು. ಅದು ನೆನಪಾಗಿ ಒಂದು ಬೂಚು ಔಷಧ ಕುಡಿಸಿದೆ.

ಕುಡೀಲಿಕ್ಕೆ ಅಂತ ಇಟಕೊಂಡ ಬಾಟಲಿ ನೀರಿಂದ ವಸ್ತ್ರಾ ಒದ್ದಿ ಮಾಡಿ, ಎಷ್ಟ ಸಾಧ್ಯ ಆಗ್ತದ ಅಷ್ಟು ಮೈ ಒರೆಸಿದೆ. ಏನು ಮಾಡಿದ್ರೂ ನಿನ್ನ ಜ್ವರ ಇಳೀವಲ್ತು, ನೀ ಅಂತೂ ನೀರ ಸೈತ ಬಾಯಾಗ ಹಾಕಲಿಕ್ಕೆ ತಯಾರಿಲ್ಲ. ನಿಂದು ಒಂದs ಜಪಾ ಅವ್ವಾನ ಕಡೆ ಹೋಗೋಣು, ಅವ್ವಾನ ಕಡೆ ಹೋಗೋಣು. ನನಗಂತೂ ಮೈಯ್ಯಾಗಿನ ಶಕ್ತಿ ಹೋದಂಗ ಆಗಿ, ಅಳು ಬಂದಬಿಡ್ತು. ನಾ ಅಳೂದು ನೋಡಿ, ಬಾಜೂಕಿನ ಸೀಟಿನಾಗ ಕುತ್ತಿದ್ದ ಆಯಿ ಕೇಳಿತು 'ಏನ್ ಆತವಾ? ಯಾಕ ಅಳಾಕತ್ತಿ? ತೌರ ಮನಿ ನೆನಪ ಬಂತ ಏನು?' ಇಷ್ಟು ಲಗೇಜು, ಕೂಸಿನ್ನ ಕರಕೊಂಡು ಸಣ್ಣ ಹೆಣ್ಣಮಗಳು ಒಬ್ಬಾಕಿನ ಹೊಂಟಾಳ ಅಂದ್ರ, ತೌರ ಮನಿಯಿಂದ ಗಂಡನ ಮನಿಗೆ ಹೊಂಟಾಳ ಅಂತ ಊಹಾ ಮಾಡೋದು ಅಷ್ಟೇನೂ ತ್ರಾಸ ಇರಲಿಲ್ಲ. ಅದ್ರಾಗ ತಲಿ ಬೆಳ್ಳಗಾದ ಮುದುಕಿ ಬ್ಯಾರೆ. ಹಿಂತಾವ ಎಷ್ಟು ನೋಡಿದ್ದಳೋ ಏನೋ? ಆಕಿ ಕೇಳೂದs ತಡಾ, ಅವ್ವಾನ ನೆನಪಾಗಿ ನನ್ನ ಅಳು ಇನ್ನೂ ಹೆಚ್ಚಾತು. ತುಟಿ ಕಚ್ಚಿ ಹಿಡದೇನಿ, ಕಣ್ಣಾಗ ದಳಾ ದಳಾ ನೀರ ಹರಿಲಿಕತ್ತಾವ. ನಾ ಅಳೂದು ನೋಡಿ, ನೀನೂ ಅಳಲಿಕ್ಕೆ ಚಾಲು ಮಾಡಿದಿ. ಪಾಪ, ಆಕಿಗೆ ಏನ್ ಅನ್ನಿಸಿತೋ ಏನೋ, ನನ್ನ ಸ್ವಲ್ಪ ಸರಿಸಿ, ಅಷ್ಟರಾಗ ಜಾಗಾ ಮಾಡಕೊಂಡ ಬಾಜೂಕ ಬಂದ ಕೂತಳು. 'ಫಾಲ್ಸ್ ದಾಗಿನ ಧಬಧಬಿ ಎಲ್ಲಾ ನಿನ್ನ ಕಣ್ಣಾಗs ತುಂಬಿಸಿ ಕೊಂಡಿಯೇನ ಹುಚ್ಚ ಹುಡುಗಿ' ಅಂತನ್ನುತ್ತಾ ಒಂದೈದು ನಿಮಿಷ ತಲಿ ಮ್ಯಾಲೆ ಕೈ ಆಡಿಸಿ ಸಮಾಧಾನ ಮಾಡಿದ್ಲು. ನನಗ ಅದರಿಂದ ಎಷ್ಟ ಸಮಾಧಾನ ಆತು ಅನ್ನೋದು ಈಗ ಹೇಳಲಿಕ್ಕೆ ಆಗೋದಿಲ್ಲ. ಆವಾಗಿನ ಕಾಲಕ್ಕ ತೌರುಮನಿಯಿಂದ ಹೋಗೂ ಹೆಣ್ಣಮಕ್ಕಳ 'ಕಣ್ಣಾಗ ಧಬಧಬಿ, ಚೀಲದಾಗ ಕರದಂಟು' ಅನ್ನೋದು ಸಾಮಾನ್ಯ ವಿಷಯ. ಮುಂಜಾನಿಂದ ಅಲ್ಲೀ ತನಕ ನಡದಿದ್ದ ಎಲ್ಲಾ ಕಥಿ ಆಕೀಗೆ ಹೇಳಿದೆ.

'ಹುಡುಗಾ ಜಪೋ ಇಟಕೊಂಡೈತಿ ಅನಸತೈತಿ. ನನ್ನ ಕೇಳಿದ್ರ ನೀ ವಾಪಸ್ ತೌರ ಮನೀಗ ಹೋಗುದು ಭೋಲೋ. ಜ್ವರಾ ಇಳೀತಂದ್ರ ನಾಕ ದಿನಾ ಬಿಟ್ಟೂ ಬರಬೌದು' ಅಂತ ಹೇಳಿದಳು. ನಾನು ಅದರ ಬಗ್ಗೆ ಯೋಚನೆ ಮಾಡುವಷ್ಟರಾಗ, 'ನಂದ ಊರ ಬಂತ, ವಿಚಾರ ಮಾಡು. ಆರಾಮಾಕ್ಕೈತಿ ಕೂಸಿಗೆ, ಕಾಳಜಿ ಮಾಡಬ್ಯಾಡ; ಇದನ್ನ ಕೂಸಿಗೆ ಕೊಡವಾ' ಅಂತಾ ಹೇಳಿ ತನ್ನ ಪಿಶ್ವಿದಾಗಿಂದ ಬಿಸ್ಕಿಟ್ ಪಾಕೀಟು ತಗದು, ನನಗ ಕೊಟ್ಟು ಇಳಿದು ಹೋದಳು. ಯಾಕೋ ನಂಗ ಅದನ್ನ 'ಬ್ಯಾಡಾ' ಅನ್ನೂ ಮನಸ ಬರಲಿಲ್ಲಾ. ಆಕಿ ಇಳಿದ ಮ್ಯಾಲೇ ಗೊತ್ತಾತು ಬಸ್ಸು, ಯರಗಟ್ಟಿ ದಾಟಿ ಮುನವಳ್ಳಿಗೆ ಬಂದದ ಅಂತ. ಅಂದ್ರ ಬಳ್ಳಾರಿ ಮುಟ್ಟಲಿಕ್ಕೆ ಇನ್ನೂ ಎಂಟ ತಾಸಾದ್ರೂ ಬೇಕು. ವಾಪಸ್ ಹೋದ್ರ ಎರಡ ತಾಸಿನಾಗ ಗೋಕಾಕ, ಅಲ್ಲಿಂದ ಫಾಲ್ಸ್ ಭಾಳ ಅಂದ್ರ ಅರ್ಧ ತಾಸು. ಹೆಂಗ ಆದ್ರೂ ಒಟ್ಟ ಮೂರು ತಾಸಿನಾಗ ಮುಟ್ಟಬಹುದೇನೋ?

ಆದ್ರ, ಟಿಕೇಟು ಬಳ್ಳಾರಿ ತನಕ ತಗಸಿದ್ದೆ. ಆಗೆಲ್ಲಾ, ಕೈಯ್ಯಾಗ ಭಾಳ ರೊಕ್ಕಾ ಇರತಿದ್ದಿಲ್ಲ. ಎಲ್ಲಾ ಅಷ್ಟಕ್ಕಷ್ಟs. ಹೊಟ್ಟೆಗಿದ್ರ ಬಟ್ಟೆಗಿಲ್ಲಾ ಅನ್ನೂ ಪರಿಸ್ಥಿತಿ. ರಜಾ ಸಿಗಂಗಿಲ್ಲಾ ಅನ್ನೂದರ ಜೋಡಿ, ಇನ್ನೊಂದು ಟಿಕೀಟಿನ ರೊಕ್ಕಾ ಹೊಂದಸಬೇಕಾಗ್ತದಲ್ಲಾ ಅನ್ನೂದೂ ಇವ್ರು ಬರದೇ ಇರೋದಕ್ಕ ಕಾರಣ ಇತ್ತು. ಭಾಳ ಅಂದ್ರ ಹತ್ತು ರೂಪಾಯಿ ಇದ್ದುವು ಕೈಯ್ಯಾಗ. ಅಷ್ಟರಾಗ ವಾಪಸ್ ಫಾಲ್ಸ್ ಮುಟ್ಟಲಿಕ್ಕಂತೂ ಆಗೂದಿಲ್ಲ. ಅದೂ ಅಲ್ಲದ ಇವ್ರಿಗೆ ಟಪಾಲಿನಾಗ ಇವತ್ತಿನ ದಿನಾ ಈ ಬಸ್ಸಿಗೆ ಬರ್ತೇನಿ ಅಂತ ಬ್ಯಾರೆ ತಿಳಿಸಿದ್ದೆ. ಅವ್ರು ಬಳ್ಳಾರಿಗೆ ಬಂದು ಬಸ್ಸಿಗೆ ಹಾದಿ ಕಾಯ್ಕೋತ

## ಪದಗಳ ಅರ್ಥ

ದವಾಖಾನಿ: ಆಸ್ಪತ್ರೆ
ಅರಿವಿ: ಬಟ್ಟೆ
ಗಿರಣಿ: ಮಿಲ್ಲು
ಅರಳೀ: ಹತ್ತಿ
ನಡಬರಕ: ನಡುವೆ, ಮಧ್ಯ
ಪಾಯಿಖಾನೆ: ಟಾಯ್ಲೆಟ್
ಪಾವಣ್ಯಾರು: ಸಂಬಂಧಿಕರು
ಜಂಪರ್ ಪೀಸ್: ಬ್ಲೌಸ್ ಪೀಸ್
ವಾಟಾಗಟಿ: ಮದುವೆಯ ಮಾತುಕತೆ
ಸಾಖರಪುಡಾ: ಮದುವೆಯ ನಿಶ್ಚಿತಾರ್ಥ
ವ್ಯಾಳ್ಯಾ: ವೇಳೆ, ಸಮಯ
ಚಿಗವ್ವ: ಚಿಕ್ಕಮ್ಮ, ಮೌಶಿ
ಖೋಲಿ: ಕೋಣೆ
ಸಾಲಿ: ಶಾಲೆ
ಅಚ್ಛಾ ಮಾಡೋದು : ಅತೀ ಪ್ರೀತಿ ಮಾಡೋದು
ಎರಡ ಬಿಗದ: ಎರಡೇಟು ಕೊಟ್ಟು
ಕಡ್ತಾ: ಏಟು, ಪೆಟ್ಟು
ಕುಕ್ಕರಬಡಿ: ಕುಳಿತುಕೊಳ್ಳು
ರಗಡ: ಬಹಳ
ಛಂದಂಗ: ಚೆನ್ನಾಗಿ
ತಾಸ: ತಾಸು, ಗಂಟೆ
ಶಟಕೊಂಡ: ಸಿಟ್ಟಾಗಿ
ಕುತ್ತ ಪೆಟ್ಟಿಗಿ: ಕುಳಿತ ಬಾರಿಗೆ
ಸಾಥ: ಹಾವಳಿ
ಬೂಚು: ಮುಚ್ಚಳ
ವಸ್ತ್ರಾ: ಕರವಸ್ತ್ರ, ಕರ್ಚೀಫು
ಸೈತ: ಸಹ, ಕೂಡ
ಆಯಿ: ಮುದುಕಿ, ಅಜ್ಜಿ
ಧಬಧಬಿ: ಫಾಲ್ಸು
ಜಪೋ ಇಟ್ಟುಕೊಳ್ಳೋದು: ಬಲವಾದ ಪ್ರೀತಿ ದೂರವಾದರೆ ಜ್ವರ ಬರುವಷ್ಟು!
ಭೋಲೋ: ಒಳ್ಳೆಯ
ಪಿಶ್ವಿ: ಚೀಲ
ರೊಕ್ಕಾ: ದುಡ್ಡು
ಟಪಾಲಿನಾಗ: ಪತ್ರದಲ್ಲಿ
ಖರೇ: ನಿಜ
ತಲಿ ಕೆಟ್ಟ ಥಾಣ ಆಗೋದು : ವಿಪರೀತ ತಲೆ ಕೆಡೋದು
ಅಂವಾ: ಅವನು
ಬರೂಮುಂದ: ಬರುವಾಗ
ಹೋಗೂಮುಂದ: ಹೋಗುವಾಗ
ಬೋಕಾಣ್ಯಾ: ನಮ್ಮ ತಾತನ ಪ್ರೀತಿ ಮಿಶ್ರಿತ ವಿಶಿಷ್ಟ ಬೈಗುಳ